
# ಬೆಳಕಿನ ಸಂಚಲನ

ಸಂ 1, ಸಂ 12 ಏಪ್ರಿಲ್ 2014



## ಗುರೂಜಿ ಕೃಷ್ಣಾನಂದ (1939-2012)

### ಬೆಳಕು

ಇದು ಭೌತಿಕ ಮಟ್ಟದ ಬೆಳಕಲ್ಲ, ಅತ್ಯಂತ ಸೂಕ್ಷ್ಮ ಬೆಳಕು. ಈ ಬೆಳಕು ಎಲ್ಲ ಸೃಷ್ಠಿಯ ಮೂಲ. ಎಲ್ಲ ಸಕ್ರಿಯ ಶಕ್ತಿಗಳ ಮೂಲ. ಪ್ರೀತಿ, ಶಾಂತಿ, ಸತ್ಯ, ವಿವೇಕ ಮತ್ತು ಸಮಸ್ತ ಜೀವರಾಶಿಗಳ ಮೂಲ. ಈ ಬೆಳಕೇ ದೇವರು.

### ಚಾನಲಿಂಗ್

ಬೆಳಕನ್ನು ನಮ್ಮೊಳಗೆ ಪ್ರವೇಶಿಸುವಂತೆ ಉದ್ದೇಶಿಸಿ, ನಂತರ ಇಡೀ ಪ್ರಪಂಚಕ್ಕೆ ಹರಡುವಂತೆ ಮಾಡುವುದೇ ಚಾನಲಿಂಗ್. ನಮ್ಮ ಶರೀರ ಬೆಳಕಿನ ಅತ್ಯುನ್ನತ ತರಂಗಗಳನ್ನು ಸ್ಥೂಲಮಟ್ಟದ ತರಂಗಗಳಾಗಿ ಬದಲಾಯಿಸುತ್ತದೆ.

ಬೆಳಕಿನ ಕಂಪನಗಳು ಎಲ್ಲ ಜೀವಿಗಳನ್ನು ಮತ್ತು ಪ್ರಕೃತಿಯನ್ನು ತಲುಪುತ್ತವೆ. ಅವು ಹೀಲಿಂಗ್ ಚೈತನ್ಯಗಳನ್ನು, ಪ್ರೇಮ, ಶಾಂತಿ ಮತ್ತು ಸಕಾರಾತ್ಮಕತೆಗಳನ್ನು ಹೊಂದಿರುತ್ತವೆ. ಅವು ಪರಿವರ್ತನೆಗೆ ಸಹಾಯ ಮಾಡುತ್ತವೆ. ನಾವು ಉತ್ತಮ ಮಾನವ ಜೀವಿಗಳಾಗುತ್ತೇವೆ. ನಮ್ಮ ಪ್ರಪಂಚ, ಉತ್ತಮ ಪ್ರಪಂಚವಾಗುತ್ತದೆ.

### ತಂತ್ರ

ನಿಮ್ಮ ಮೇಲೆ ಬೆಳಕಿನ ಸಾಗರವಿದೆ ಎಂದು ಕಲ್ಪಿಸಿಕೊಳ್ಳಿ. ಬೆಳಕು ನಿಮ್ಮ ದೇಹದೊಳಕ್ಕೆ ಬಂದು ತುಂಬಿಕೊಂಡಂತೆ ಭಾವಿಸಿ. ನಂತರ ಬೆಳಕಿನಲ್ಲಿರುವ ಪ್ರೇಮ ಮತ್ತು ಶಾಂತಿಗಳನ್ನು ಒಂದು ನಿಮಿಷದವರೆಗೆ ಅನುಭವಿಸಿ. ಆ ಬೆಳಕು ಕ್ರಮೇಣ ನಿಮ್ಮ ಮನೆ, ಸುತ್ತಮುತ್ತಲ ಪ್ರದೇಶ, ದೇಶ ಮತ್ತು ಪ್ರಪಂಚಕ್ಕೆ ಹರಡಿದಂತೆ ಕಲ್ಪಿಸಿಕೊಳ್ಳಿ.

ಇದನ್ನು ಕನಿಷ್ಟ 7 ನಿಮಿಷ ಅಭ್ಯಾಸ ಮಾಡಿ.

### ಲೈಟ್ ಚಾನಲ್ ವಿಶ್ವ ಸಂಚಲನ

ಈ ಸಂಚಲನವನ್ನು ಋಷಿಮಾರ್ಗದ ಸಂಸ್ಥಾಪಕರಾದ ಗುರೂಜಿ ಕೃಷ್ಣಾನಂದರವರು 18-05-2008 ರಂದು ಪ್ರಾರಂಭಿಸಿದರು.

ಈ ಸಂಚಲನವೆಂದರೆ ಬೆಳಕನ್ನು ಪ್ರತಿದಿನ ಏಳು ನಿಮಿಷಗಳವರೆಗೆ ಬೆಳಿಗ್ಗೆ ಏಳುವಾಗ ಅಥವಾ ರಾತ್ರಿ ಮಲಗುವ ಮೊದಲು ನಮ್ಮ ನಮ್ಮ ಸ್ಥಳಗಳಿಂದಲೇ ಚಾನಲ್ ಮಾಡುವುದು.

ಈ ಸಂಚಲನದ ಗುರಿ ಮುಖ್ಯವಾಗಿ ಈ ಭೂಮಿಯ ಮೇಲೆ ಶಾಂತಿಯನ್ನು ತರುವುದು.

### ಸಂಚಲನದ ವೈಶಿಷ್ಟತೆ

- ಬೆಳಕಿನಿಂದ ಏಕತೆ.
- ಇದು ಧಾರ್ಮಿಕ ಚಟುವಟಿಕೆಯಲ್ಲ.
- ವಿಶ್ವಾತ್ಮಕವಾದದ್ದು.
- ಇಲ್ಲಿ ಯಾವುದೇ ಕಟ್ಟುಪಾಡುಗಳಿಲ್ಲ.
- ಇಲ್ಲಿ ಸದಸ್ಯತ್ವವಿಲ್ಲ.
- ಶಾಂತಿ ನೆಲೆಸಲು ಪ್ರತಿಯೊಬ್ಬರೂ ಕೊಡುಗೆಯನ್ನು ಕೊಡಬಹುದು.
- ಇದು ಪ್ರತಿ ವ್ಯಕ್ತಿಗೆ ಮತ್ತು ವಿಶ್ವಕ್ಕೆ ಸಹಾಯಕಾರಿ.
- ಹೊಸಯುಗಕ್ಕೆ ಪ್ರವೇಶಿಸಲು ಇದು ನಮ್ಮನ್ನು ಮತ್ತು ವಿಶ್ವವನ್ನು ಸಿದ್ಧಗೊಳಿಸುತ್ತದೆ.

## ಒಂದು ಸಂದೇಶ

**ಗುರೂಜಿ ಕೃಷ್ಣಾನಂದ**

**ಅನು: ಶ್ರೀದೇವಿ**

(ಅವರ ಭಾಷಣದ ಆಯ್ದ ಭಾಗಗಳು)

ಬೆಳಕಿನ ಸಂಚಲನ ಚೆನ್ನಾಗಿ ಹರಡುತ್ತಿದೆ. ಬೇರೆ ಬೇರೆ ನಗರ ಮತ್ತು ಪಟ್ಟಣಗಳಲ್ಲಿರುವ 100ಕ್ಕೂ ಹೆಚ್ಚು ಕಾರ್ಯಕರ್ತರು ಸದ್ದಿಲ್ಲದೆ ಈ ಶ್ರೇಷ್ಠವಾದ ಕೆಲಸವನ್ನು ಮಾಡುತ್ತಿದ್ದಾರೆ. ಅವರು ಶಾಲೆಗಳಿಗೆ ಭೇಟಿ ನೀಡಿ, ಮಕ್ಕಳಿಗೆ ಬೆಳಕನ್ನು ಚಾನಲ್ ಮಾಡಲು ಸಹಾಯ ಮಾಡುತ್ತಾರೆ ಹಾಗೂ ಮಕ್ಕಳು ಅಸಾಧಾರಣವಾದ ಈ ಚಾನಲಿಂಗ್ ಕೆಲಸವನ್ನು ಸಮರ್ಪಕವಾಗಿ ಮಾಡುತ್ತಿದ್ದಾರೆ. ಇದು ಆತ್ಮ ತೃಪ್ತಿ ನೀಡುವ ಕೆಲಸ.

ಬೆಳಕು, ತಾನು ಹರಡುವುದಕ್ಕಾಗಿ ಮಕ್ಕಳನ್ನು ಮೊದಲಿಗೆ ಆಯ್ಕೆಮಾಡಿಕೊಂಡಿದೆ. ವಯಸ್ಕರು ಅವರನ್ನು ಸೇರಬೇಕು. ಕಛೇರಿಗಳಲ್ಲಿ, ಕಾರ್ಖಾನೆಗಳಲ್ಲಿ, ಆಸ್ಪತ್ರೆಗಳಲ್ಲಿ ... ಎಲ್ಲಾ ಕಡೆಗಳಲ್ಲಿ 7 ನಿಮಿಷಗಳ ಕಾಲ ಬೆಳಕನ್ನು ಚಾನಲ್ ಮಾಡಬಹುದು. ಬೆಳಕು ಪ್ರತಿಯೊಬ್ಬರಿಗೂ ಪ್ರತಿಯೊಂದು ರೀತಿಯಲ್ಲೂ ಸಹಾಯ ಮಾಡುತ್ತದೆ.

ಲೈಟ್ ಚಾನಲಿಂಗ್ ಧಾರ್ಮಿಕವಲ್ಲದ ಮತ್ತು ವ್ಯಾಪಾರೀಕರಣವಲ್ಲದ ಒಂದು ಚಟುವಟಿಕೆ.

## ಘಟನಾವಳಿಗಳು

**ಜಯಂತ್ ದೇಶ್‌ಪಾಂಡೆ; ಅನು: ಶ್ರೀದೇವಿ**

ನಮ್ಮ ಕಾರ್ಯಕರ್ತರು ಮಾಡುತ್ತಿರುವ ನಿಸ್ವಾರ್ಥ ಕಾರ್ಯ ಅನೇಕ ಶಾಲಾ ಶಿಕ್ಷಕರ ಹೃದಯಗಳನ್ನು ಮುಟ್ಟಿದೆ. ಏತಕ್ಕಾಗಿ ಇವರು ಇದನ್ನು ಮಾಡುತ್ತಿದ್ದಾರೆ, ಇವರಿಗೆ ಇದರಿಂದ ವೈಯಕ್ತಿಕವಾಗಿ ಏನು ಸಿಗುತ್ತದೆ, ಎಂದು ಕೆಲವರು ಅಚ್ಚರಿ ಪಡುತ್ತಾರೆ. ಪ್ರಾಪಂಚಿಕ ಲಾಭವೇನೂ ಅವರಿಗೆ ವೈಯಕ್ತಿಕವಾಗಿ ಸಿಗುವುದಿಲ್ಲ. ವಾಸ್ತವದಲ್ಲಿ ಶಾಲೆಗಳಿಗೆ ಭೇಟಿ ಕೊಡಲು ಅವರು ತಮ್ಮ ಸ್ವಂತ ಸಮಯ ಮತ್ತು ಹಣವನ್ನು ಉಪಯೋಗಿಸುತ್ತಾರೆ. ಪ್ರಾಪಂಚಿಕ ಪ್ರಯೋಜನಗಳಂತೆ ಬೆಲೆ ಕಟ್ಟಲು ಸಾಧ್ಯವಾಗದಂತಹ ಗಾಢವಾದ ತೃಪ್ತಿಯನ್ನು ಇದು ಅವರಿಗೆ ಕೊಡುತ್ತದೆ. ಇತರರೊಡನೆ ಹಂಚಿಕೊಳ್ಳುವುದರಲ್ಲಿ ಆನಂದವಿದೆ. ನಮ್ಮಲ್ಲಿರುವ ಲೌಕಿಕ ಮತ್ತು ಆಧ್ಯಾತ್ಮಿಕ ಸಂಪತ್ತನ್ನು ನಾವು ಹಂಚಿಕೊಳ್ಳಲೇಬೇಕು ಎಂದು ನಮ್ಮ ಗುರೂಜಿಯವರು ಹೇಳಿದ್ದರು. ಶಾಲಾ ಅಧಿಕಾರಿಗಳು ಮತ್ತು ಮಕ್ಕಳು ಇಂತಹ ಸದ್ದಿಲ್ಲದ, ಶಾಂತಿಯುತ ಆದರೆ ಕ್ರಾಂತಿಕಾರಕ ವಿಚಾರಗಳಿಗೆ ತೆರೆದ ಮನಸ್ಸಿನವರಾದ ಕಾರಣ ನಾವು ಶಾಲೆಗಳನ್ನು ಆಯ್ಕೆ ಮಾಡಿಕೊಂಡಿದ್ದೇವೆ.

ಶಾಂತಿ ಮತ್ತು ಪ್ರೀತಿಯೆಡೆಗಿನ ಈ ಸಂಚಲನಕ್ಕೆ ಇಡೀ ಪ್ರಪಂಚವೇ ಸೇರಬೇಕೆಂದು ನಿರೀಕ್ಷಿಸುತ್ತೇವೆ. ಅವರಿಗೆ ಈ ತಂತ್ರ ಗೊತ್ತಿಲ್ಲದೇ ಇರಬಹುದು ಆದರೆ ಪ್ರೀತಿ ಮತ್ತು ಶಾಂತಿಯನ್ನು ಆಯ್ಕೆಮಾಡುವುದರ ಮೂಲಕ, ಬೆಳಕನ್ನು ಆಯ್ಕೆಮಾಡುವುದರ ಮೂಲಕ ಅವರು ಈ ಸಂಚಲನವನ್ನು ಸೇರಬಹುದು.

## ಬೆಳಕಿನ ಕ್ರಿಯಾಶಕ್ತಿ

**ಮನೋಜ್ ಚೋಪ್ರ; ಅನು: ಶ್ರೀದೇವಿ**

ಲೈಟ್ ಚಾನಲಿಂಗ್ ಪ್ರಸ್ತುತದಲ್ಲಿ ಒಂದು ಉನ್ನತ ಮತ್ತು ಸಾರ್ವತ್ರಿಕ ತಂತ್ರ. ಮನುಕುಲಕ್ಕೆ ಸಹಾಯ ಮಾಡಲು ಆ್ಯಸ್ಟ್ರಲ್ ಮಾಸ್ಟರ್‌ಗಳು ಸಾವಿರಾರು ವರ್ಷಗಳ ಸಂಶೋಧನೆ ನಡೆಸಿ ಇಂತಹ ತಂತ್ರಗಳನ್ನು ರೂಪಿಸುತ್ತಾರೆ. ಪೋಷಕರಂತೆ ನಮ್ಮನ್ನು ಪಾಲನೆ ಮಾಡುತ್ತಾರೆ. ಅವರ ಪ್ರೀತಿ ಅವೇದ್ಯವಾದದ್ದು. ಕಾಲಕ್ಕೆ ಅನುಗುಣವಾಗಿ ಅವರು ನಮಗೆ ಬೇರೆ ಬೇರೆ ತಂತ್ರಗಳನ್ನು ಕೊಡುತ್ತಾರೆ. ಈ ಪ್ರಯಾಸದ ಕಾಲದಲ್ಲಿ ಲೈಟ್ ಚಾನಲಿಂಗ್ ಬಹು ಸರಳ ಮತ್ತು ಪರಿಣಾಮಕಾರಿಯಾದ ವಿಧಾನ. ನಾವು ಶ್ರದ್ಧೆಯಿಂದ ಇದನ್ನು ಅಳವಡಿಸಿಕೊಂಡರೆ ನಮ್ಮ ಜೀವನದ ಎಲ್ಲಾ ಪರಿಸ್ಥಿತಿಯಲ್ಲಿ ಮಾರ್ಗದರ್ಶನ ಪಡೆಯುತ್ತೇವೆ.

ನಿಯತವಾಗಿ ಚಾನಲ್ ಮಾಡುತ್ತಿರುವ ಶಾಲೆಗಳು ತಮ್ಮ ಅದ್ಭುತವಾದ ಅನುಭವಗಳನ್ನು ಹಂಚಿಕೊಂಡಿದ್ದಾರೆ. ಶಾಲಾ ವಾತಾವರಣದಲ್ಲಿ ಮತ್ತು ಮಕ್ಕಳ ನಡವಳಿಕೆಯಲ್ಲಿ ಭಾರಿ ಬದಲಾವಣೆಗಳನ್ನು ಅವರು ಕಂಡಿದ್ದಾರೆ.

ನಾವು ಎದುರಿಸುತ್ತಿರುವ ಗಂಭೀರವಾದ ಸಮಸ್ಯೆಗಳಿಗೆ ನಿಯತವಾಗಿ ಮಾಡುವ ಸಾಮೂಹಿಕ ಚಾನಲಿಂಗ್‌ಗಳೇ ಪರಿಹಾರ. ನಾವು ಸಾಮೂಹಿಕವಾಗಿ ಚಾನಲ್ ಮಾಡೋಣ ಹಾಗೂ ಉತ್ತಮವಾದ ಬದುಕಿಗಾಗಿ ಪ್ರಾರ್ಥನೆ ಮಾಡೋಣ.

**ಮಾನಸ ಫೌಂಡೇಶನ್ (ರಿ)**
ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರಸ್ತೆ) ಬೆಂಗಳೂರು–560077 ಭಾರತ.
ಫೋನ್ : (080) 2846 5280, 99000 75280 (10 AM to 4 PM)
ಇ–ಮೇಲ್ : info@lightagemasters.com info@lightchannels.com
ವೆಬ್‌ಸೈಟ್ : www.lightagemasters.com www.lightchannels.com

## ಲೈಟ್ ಚಾನಲಿಂಗ್ ಕೇಂದ್ರಗಳು

ನಮ್ಮ ಲೈಟ್ ಚಾನಲಿಂಗ್ ಕೇಂದ್ರಗಳಲ್ಲಿ ಸ್ಥಳೀಯರು ಲೈಟ್ ಚಾನಲ್ ಮಾಡಲು ನಿಗದಿಪಡಿಸಿದ ಸಮಯದಲ್ಲಿ ಒಟ್ಟಿಗೆ ಸೇರುತ್ತಾರೆ. ಇದರಲ್ಲಿ ಭಾಗವಹಿಸಲು ಎಲ್ಲರಿಗೂ ಸ್ವಾಗತ. ಯಾವುದೇ ಶುಲ್ಕವಿಲ್ಲ ಹಾಗೂ ಸದಸ್ಯರಾಗಬೇಕಿಲ್ಲ.

**ಬೆಂಗಳೂರು**

ಸೋಮವಾರದಿಂದ ಶುಕ್ರವಾರದವರೆಗೆ
(ಸಂಜೆ 7:00 - 7:15)
ಶ್ರೀ ಸಿದ್ಧಾಶ್ರಮ, 17ನೇ ಅಡ್ಡರಸ್ತೆ, ಮಲ್ಲೇಶ್ವರಂ
☎ 9084121545 ಶ್ರೀ ಚಂದ್ರಶೇಖರ್

ಸೋಮವಾರ (ಸಂಜೆ 6:30 - 7:00)
ಆಂಜನೇಯ ದೇವಸ್ಥಾನ, ಮಹಾಲಕ್ಷ್ಮಿ ಬಡಾವಣೆ
☎ 9972111809 ಶ್ರೀಮತಿ ಅಂಜಲಿ ಪಾಟಿಲ್ ಕೆ.

ಬುಧವಾರ (ಸಂಜೆ 6:30 - 7:00)
ಮಾರುತಿ ಮಂದಿರ, ವಿಜಯನಗರ
☎ 9972111809 ಶ್ರೀಮತಿ ಅಂಜಲಿ ಪಾಟಿಲ್ ಕೆ.

ಗುರುವಾರ (ಸಂಜೆ 6:30 - 7:00)
ಮಂಚ್‌ಕಿನ್ಸ್, ನಂ. 890, 38ನೇ ಅಡ್ಡರಸ್ತೆ,
20ನೇ ಮುಖ್ಯರಸ್ತೆ, 4ನೇ 'T' ಬ್ಲಾಕ್, ಜಯನಗರ
☎ 9972888033 ಕಾರ್ತಿಕ್ ಎನ್.

ಗುರುವಾರ (ಸಂಜೆ 6:30 - 7:00)
ನಂ. 312, ಹಂತ-4, ಗೋಲ್ಡನ್ ಪಾರ್ಕ್
ಅಪಾರ್ಟ್‌ಮೆಂಟ್, ಕೆ.ಸಿ.ಡಿ.ಸಿ. ಮುಖ್ಯರಸ್ತೆ,
ಬೊಮ್ಮನಹಳ್ಳಿ.
☎ 9886437042 ಡಾ. ರವಿಂದರ್ ಸಿಂಗ್ ಗೌರ್

ಶುಕ್ರವಾರ (ಸಂಜೆ 6:30 - 7:00)
'ಸುಮತಿ', ನಂ. 481, 7ನೇ ಅಡ್ಡರಸ್ತೆ,
7ನೇ ಮುಖ್ಯರಸ್ತೆ, ಜೆ.ಪಿ. ನಗರ 3ನೇ ಹಂತ
☎ 9900110351 ಶ್ರೀ ರಮೇಶ್ ವಿ. ಭೋಸೆಕರ್

ಶನಿವಾರ (ಸಂಜೆ 5:30 - 6:00)
ಶ್ರೀ ರಂಗ ಕಲಾಕ್ಷೇತ್ರ, 13ನೇ ಅಡ್ಡರಸ್ತೆ,
2ನೇ ಹಂತ, ಇಂದಿರಾನಗರ
☎ 9902844667 ಶ್ರೀಮತಿ ಮಂಜು ಮಹೇಶ್ವರಿ

ಶನಿವಾರ (ಸಂಜೆ 6:30 - 7:00)
ಬಲಮುರಿ ಮಹಾಗಣಪತಿ, 8ನೇ ಅಡ್ಡರಸ್ತೆ,
ಹೊಯ್ಸಳ ವೃತ್ತದ ಬಳಿ, ಕೆಂಗೇರಿ ಸೆಟಲೈಟ್ ಟೌನ್
☎ 9972111809 ಶ್ರೀಮತಿ ಅಂಜಲಿ ಪಾಟಿಲ್ ಕೆ.

ಶನಿವಾರ (ಸಂಜೆ 6:00 - 7:00)
ಶಿಕ್ಷಾ ಸಾಗರ್ ಪ್ರೈಮರಿ ಶಾಲೆ, ನಂ. 77,
5ನೇ ಮುಖ್ಯ ರಸ್ತೆ, ಪೋಸ್ಟಲ್ ಕಾಲೋನಿ,
ಸಂಜಯ ನಗರ
☎ 9686571066 ಶ್ರೀ ಸುದೀಪ್ ಜಯರಾಮ್

ಶನಿವಾರ (ಸಂಜೆ 7:30 - 8:30)
ಗುರುದ್ವಾರ ಸಾಹಿಬ್, ಆಂಜನೇಯ ದೇವಸ್ಥಾನದ
ಎದುರು, ಅಶ್ವತ್ಥ ನಗರ ಮುಖ್ಯ ರಸ್ತೆ,
ಸಂಜಯ ನಗರ
☎ 9686571066 ಶ್ರೀ ಸುದೀಪ್ ಜಯರಾಮ್



ಮುಂಬಯಿ ನಗರದ ಮನೆಯೊಂದರಲ್ಲಿ ಲೈಟ್ ಚಾನಲ್ ಮಾಡುತ್ತಿರುವುದು

## ಪ್ರಮುಖ ಘಟನೆಗಳು

- ಜನವರಿ 31, 2014, ನಾಲ್ಕನೇ ವಿಶ್ವ ಚಾನಲ್ಸ್ ದಿನ – ಭಾರತದಾದ್ಯಂತ 2100 ಶಾಲೆಗಳ 10 ಲಕ್ಷಕ್ಕೂ ಹೆಚ್ಚು ಮಕ್ಕಳು ಮತ್ತು ಶಿಕ್ಷಕರು ಲೈಟ್ ಚಾನಲ್ ಮಾಡುವುದರ ಮೂಲಕ ಈ ದಿನವನ್ನು ಯಶಸ್ವಿಗೊಳಿಸಿದರು.
- ಜೂನ್ 29, 2013 - ಬೆಂಗಳೂರು, ಮೈಸೂರು, ಹೈದ್ರಾಬಾದ್, ಸಾಂಗ್ಲಿಯಲ್ಲಿನ 30 ಶಾಲೆಗಳಲ್ಲಿ ಮತ್ತು ಭಾರತದಾದ್ಯಂತ ಲೈಟ್ ಚಾನಲಿಂಗ್ ಕೇಂದ್ರಗಳಲ್ಲಿ 13,449 ಮಕ್ಕಳು ಲೈಟ್ ಚಾನಲಿಂಗ್ ಮಾಡಿದರು.
- ಫೆಬ್ರವರಿ 1, 2013, ಮೂರನೇ ವಿಶ್ವ ಚಾನಲ್‌ಗಳ ದಿನ – ಭಾರತದಾದ್ಯಂತ 1868 ಶಾಲೆಗಳ ಸುಮಾರು 8.86 ಲಕ್ಷ ಮಕ್ಕಳು ಮತ್ತು ಅಧ್ಯಾಪಕರು ಲೈಟ್ ಚಾನಲ್ ಮಾಡುವುದರ ಮೂಲಕ ಈ ದಿನವನ್ನು ಯಶಸ್ವಿಗೊಳಿಸಿದರು.
- ಮೇ 7, 2012 – ಬೆಂಗಳೂರಿನ ಚೌಡಯ್ಯ ಸ್ಮಾರಕ ಭವನದಲ್ಲಿ ಆಯೋಜಿಸಿದ್ದ ಲೈಟ್ ಚಾನಲ್‌ಗಳ ಸಮಾವೇಶದಲ್ಲಿ ಸುಮಾರು ಒಂದು ಸಾವಿರ ಜನರು ಸೇರಿದ್ದರು. ಪ್ರಪಂಚದಾದ್ಯಂತ ಸಾವಿರಾರು ಜನರು ವೆಬ್‌ಕಾಸ್ಟ್ ಮತ್ತು ಮನೋಸಂಪರ್ಕಗಳ ಮೂಲಕ ತಮ್ಮ ತಮ್ಮ ಸ್ಥಳದಿಂದಲೇ ಭಾಗವಹಿಸಿ 15 ನಿಮಿಷಗಳ ಕಾಲ ಲೈಟ್ ಚಾನಲ್ ಮಾಡಿದರು.
- ಫೆಬ್ರವರಿ 1, 2012, ವಿಶ್ವ ಚಾನಲ್‌ಗಳ ದಿನ – ನೂರಾರು ಶಾಲೆಗಳ 6 ಲಕ್ಷಕ್ಕೂ ಹೆಚ್ಚು ಮಕ್ಕಳು ಲೈಟ್ ಚಾನಲ್ ಮಾಡುವುದರ ಮೂಲಕ ಈ ದಿನವನ್ನು ಯಶಸ್ವಿಗೊಳಿಸಿದರು.
- ಜನವರಿ 18, 2012 – ಬೆಂಗಳೂರು, ಪುಣೆ, ಚೆನ್ನೈ ಮತ್ತು ಮಂಗಳೂರಿನ 11, 570 ಮಕ್ಕಳು 16 ವಿವಿಧ ಸೆಷನ್‌ಗಳಲ್ಲಿ ಲೈಟ್ ಚಾನಲ್ ಮಾಡಿದರು.
- ಫೆಬ್ರವರಿ 1, 2011, ವಿಶ್ವ ಚಾನಲ್‌ಗಳ ದಿನ – 130 ಸ್ವಯಂಸೇವಕರು ಭಾರತದಾದ್ಯಂತ ಸುಮಾರು 600 ಶಾಲೆಗಳಲ್ಲಿನ 4 ಲಕ್ಷಕ್ಕೂ ಹೆಚ್ಚು ಮಕ್ಕಳಿಗೆ ಲೈಟ್ ಚಾನಲಿಂಗ್ ಅಭ್ಯಾಸ ಮಾಡಿಸಿದರು.
- ಫೆಬ್ರವರಿ 1, 2010 – 50 ಕ್ಕೂ ಹೆಚ್ಚು ಸ್ವಯಂಸೇವಕರ ತಂಡವೊಂದು ದಕ್ಷಿಣ ಭಾರತದ 50 ಶಾಲೆಗಳನ್ನು ಸಂಪರ್ಕಿಸಿ ಸುಮಾರು 30,000 ಮಕ್ಕಳಿಂದ ಲೈಟ್ ಚಾನಲಿಂಗ್ ಮಾಡಿಸುವುದರ ಮೂಲಕ ಲೈಟ್ ಚಾನಲ್ಸ್ ವಿಶ್ವ ಸಂಚಲನಕ್ಕೆ ಭಾರಿ ಚಾಲನೆ ನೀಡಿದರು.

## ಶಾಲೆಗಳಲ್ಲಿ ಲೈಟ್ ಚಾನಲಿಂಗ್

| | |
|---|---|
| ಭಾಗವಹಿಸಿದ ಶಾಲೆಗಳ ಸಂಖ್ಯೆ | 4607 |
| ಲೈಟ್ ಚಾನಲ್ ಮಾಡಿರುವ ವಿದ್ಯಾರ್ಥಿಗಳ ಸಂಖ್ಯೆ | 26.04 ಲಕ್ಷ |
| ಪ್ರತಿದಿನ ಚಾನಲಿಂಗ್ ಮಾಡುತ್ತಿರುವ ಶಾಲೆಗಳ ಸಂಖ್ಯೆ | 1140 |
| ಪ್ರತಿದಿನ ಚಾನಲಿಂಗ್ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ | 5.18 ಲಕ್ಷ |

## ಶಾಲೆಗಳಿಗೊಂದು ಮನವಿ

ನಿಮ್ಮ ಶಾಲೆಯಲ್ಲಿ ಲೈಟ್ ಚಾನಲಿಂಗ್ ಅನ್ನು ಪ್ರತಿನಿತ್ಯದ ಪ್ರಾರ್ಥನಾ ಸಮಯದಲ್ಲಿ ಮಾಡಿಸುವುದರ ಮೂಲಕ ಲೈಟ್ ಚಾನಲ್ಸ್ ವಿಶ್ವ ಸಂಚಲನವನ್ನು ಬಲಗೊಳಿಸಲು ಸಹಾಯ ಮಾಡಿ

## ಸ್ಪರ್ಶ

**ಪದ್ಮಜ ಬಾಲಾಜಿ**

**ಅನು: ಶ್ರೀದೇವಿ**

ಒಂದು ಹೋಲಿಸ್ಟಿಕ್ ಹೀಲಿಂಗ್ ಸೆಷನ್ ನಂತರ ಹೀಲರ್ ಅತ್ಯಂತ ಎಚ್ಚರಿಕೆಯಿಂದ ತಮ್ಮ ಕೈಗಳನ್ನು ತೊಳೆದುಕೊಂಡರು. ಉಪಶಮನ ಪಡೆದವರು ಮತ್ತು ಹೀಲರ್ ಇಬ್ಬರೂ ಮೌನದಿಂದಿದ್ದ ಕಾರಣ ಆ ಸೆಷನ್ ಗಾಢವಾದಂತೆ ಅನ್ನಿಸಿತು. ಉಪಶಮನ ಹೊಂದಿದವರ ಮತ್ತು ಹೀಲರ್‌ಗಳಿಬ್ಬರ ಕಣ್ಣುಗಳಲ್ಲೂ ಮೂಡಿದ ಕೃತಜ್ಞತೆ ಮತ್ತು ಸಂತೋಷವನ್ನೋದಲು ನನಗೆ ಸಾಧ್ಯವಾಯಿತು.

ವರ್ಷಗಳು ಕಳೆದ ನಂತರ, ದಿವ್ಯ ಬೆಳಕಿನ ಕಾರ್ಯವಿಧಾನದ ಬಗೆಗಿನ ಜ್ಞಾನ ಸ್ವಲ್ಪ ಸ್ವಲ್ಪವಾಗಿ ನನ್ನಲ್ಲಿ ಇಳಿದಾಗ, ನನ್ನ ಸ್ವಪ್ರಜ್ಞೆಗೆ ತಿಳಿಯದಿದ್ದರೂ ಆ ಹೀಲಿಂಗ್ ಘಟನೆಯ ರೀಲುಗಳನ್ನು ನನ್ನ ಸಾಮಾನ್ಯ ಕಣ್ಣುಗಳು ಹೇಗೆ ಮನಃಪಟಲದಲ್ಲಿ ಹಿಡಿದಿದ್ದವು ಎನ್ನುವುದು ಇದ್ದಕ್ಕಿದ್ದಂತೆ ನನಗೆ ಅರಿವಾಯಿತು.

ನಮ್ಮ ಮೂಲವಾದ ಬೆಳಕಿನ ಕಡೆಗೆ ಹಿಂದಿರುಗುವುದನ್ನು ಪ್ರಜ್ಞಾಪೂರ್ವಕವಾಗಿ ಮತ್ತು ನಿರಂತರವಾಗಿ ಆಯ್ಕೆ ಮಾಡಿಕೊಳ್ಳುವವರಿಗೆ ಹೀಲಿಂಗ್, ಮೂಲತಃ, ಒಂದು ಮುಂದುವರಿಯುತ್ತಿರುವ ಪ್ರಕ್ರಿಯೆ. ದೈವ ಅಂತಹ ವಿನೀತ ಆತ್ಮದ ಜೀವನದ ಹೊಣೆ ಹೊರುತ್ತದೆ ಹಾಗೂ ಬೆಳಕಿನಲ್ಲಿ ಒಂದಾಗುವವರೆಗೆ ಪ್ರೀತಿಯ ಮಳೆಗರೆಯುವುದರ ಮೂಲಕ ಅನೇಕ ಸ್ತರಗಳ ಮತ್ತು ಮಟ್ಟಗಳ ಹೀಲಿಂಗ್ ನಡೆಯುವಂತೆ ನೋಡಿಕೊಳ್ಳುತ್ತದೆ.

ಅಂತಹ ಕೃಪೆಗೆ ಪಾತ್ರರಾಗಲು ಬೇಕಾಗುವ ಒಂದು ನಿರ್ಣಾಯಕ ಅಂಶವೆಂದರೆ ನಿರಂತರವಾಗಿ ಇತರರನ್ನು ಬೆಳಕಿನಿಂದ ತುಂಬುವುದು. ನಿಮಗೆ ದೊರೆತ ಎಲ್ಲವನ್ನು ಇತರರಿಗೆ ನೀಡಿದಾಗ ಅದು ನಿಮಗೆ ದ್ವಿಗುಣವಾಗುತ್ತದೆ. ನಿಜಾಂಶವೆಂದರೆ, ಸಹ ಮಾನವನೊಬ್ಬ ಕಷ್ಟ ಪಡುತ್ತಿರುವಾಗ ಸಹಾಯ ಅಥವಾ ಹೀಲಿಂಗ್ ಮಾಡದಿರುವುದು ಅಥವಾ ಪ್ರತಿಕ್ರಿಯಿಸದೇ ಇರುವುದು ಅನಾಧ್ಯಾತ್ಮಿಕ ಎಂದು ನನ್ನ ಗುರುಗಳಿಂದ ಕಲಿತಿದ್ದೇನೆ.

ಹಾಗಾದರೆ, ಒಬ್ಬ ಅಸಾಧಾರಣ ಹೋಲಿಸ್ಟಿಕ್ ಹೀಲರ್ ಆಗಲು ಬೇಕಾದ ಅರ್ಹತೆಗಳೇನು?

ಹೋಲಿಸ್ಟಿಕ್ ಹೀಲಿಂಗ್ ಆಂತರಿಕವಾಗಿದ್ದು, ಫಲಿತಾಂಶದ ಬಗ್ಗೆ ಹೀಲ್ ಮಾಡುವವರಿಗಿರುವ ನಿರ್ಲಿಪ್ತತೆಗೆ ನೇರವಾಗಿ ಅನುಗುಣವಾಗಿರುತ್ತದೆ. 'ನಾನು ಹೀಲ್ ಮಾಡುತ್ತೇನೆ' ಎನ್ನುವ ಆಲೋಚನೆಯ ಮೂಲವನ್ನು ಹೀಲರ್ ಹೊರಹಾಕಿದಾಗ ದಿವ್ಯ ಚೈತನ್ಯಗಳು ಅವರ ಮೂಲಕ ರೋಗಿಗಳಿಗೆ ಪ್ರವಹಿಸಲು ಅವರು ಪರಿಪೂರ್ಣ ಚಾನಲ್‌ಗಳಾಗುತ್ತಾರೆ. ಹಾಗೆಯೇ, ಉಪಶಮನ ಪಡೆದವರ ನಂಬಿಕೆ ಸಹ ಸಮಾನವಾದ ನಿರ್ಣಾಯಕ ಪಾತ್ರವಹಿಸುತ್ತದೆ, ಏಕೆಂದರೆ ಅವರ ದೇಹ, ಮನಸ್ಸು ಮತ್ತು ಬುದ್ಧಿಗಳ ಮೇಲೆ ಸಮರ್ಪಕವಾಗಿ ಬೆಳಕು ಕೆಲಸಮಾಡುವುದಕ್ಕೆ ಅನುವುಮಾಡಿಕೊಡಲು ಅದು ಅವರ ಇಚ್ಛಾ ಸ್ವಾತಂತ್ರ್ಯದ ದ್ವಾರವನ್ನು ತೆರೆಯುತ್ತದೆ. ಆದ್ದರಿಂದ, ದೈವದ ಜೊತೆ ಶ್ರುತಿಗೊಳ್ಳುವುದೇ ಮಂತ್ರ.

ಒಬ್ಬ ಲೈಟ್ ಚಾನಲ್, ಬೆಳಕನ್ನು ಚಾನಲ್ ಮಾಡಿದಾಗಲೆಲ್ಲ ತಾನು ಒಬ್ಬ ಹೀಲರ್ ಆಗುವುದರ ಜೊತೆಗೆ ಉಪಶಮನ ಪಡೆಯುವವನು ಕೂಡ ಆಗಿರುತ್ತಾನೆ ಎಂದು ಇಲ್ಲಿ ಹೇಳಬೇಕಾಗುತ್ತದೆ!

ಆ ಪ್ರಕಾರ, ಭ್ರಷ್ಟಾಚಾರ ಮತ್ತು ಹಿಂಸೆಯ ಕ್ರೂರ ನಿಯಂತ್ರಣದಲ್ಲಿರುವ ಇಡೀ ಪ್ರಪಂಚಕ್ಕೆ ಲೈಟ್ ಚಾನಲ್ ಮಾಡುವುದು ಶ್ರೇಷ್ಠವಾದ ಮತ್ತು ಅತ್ಯುನ್ನತವಾದ ಅಧ್ಯಾತ್ಮಿಕ ಕಾರ್ಯ ಹಾಗೂ ಪ್ರೀತಿ ಮತ್ತು ಕೃತಜ್ಞತೆಯನ್ನು ದೈವಕ್ಕೆ ಮತ್ತು ಭೂ ತಾಯಿಗೆ ವ್ಯಕ್ತಪಡಿಸುವ ವಿಧಾನ ಎಂದು ಹೇಳಲಾಗುವುದಿಲ್ಲವೇ?

ಬಹಳ ಕಾಲದ ಹಿಂದೆ ನಾನು ನೋಡಿದ ಈ ಹೀಲಿಂಗ್ ಸೆಷನ್ ನನ್ನೊಳಗೆ ಆಳವಾದ ಪ್ರೇರಣೆಯನ್ನುಂಟುಮಾಡಿರಬೇಕು. ಏಕೆಂದರೆ ಲೈಟ್ ಚಾನಲ್ಸ್ ಕಾರ್ಯಕರ್ತೆಯಾಗಿ ಸೇರಿದ ದಿನ ನಾನು ಯಥೇಷ್ಟವಾಗಿ ಸುರಿಸಿದ ಕಣ್ಣೀರನ್ನು ಯಾರೂ ನೋಡಿರಲಿಲ್ಲ.

ಅಂದಿನಿಂದ ಇಂದಿನವರೆಗೆ ನಾನು ಹಿಂದಿರುಗಿ ನೋಡಿಲ್ಲ. ಒಬ್ಬ ಹೀಲರ್‌ನ ಪಾತ್ರದಲ್ಲಿ ಕಾಣಿಸಿಕೊಳ್ಳದೆ ಸಂಕಟದಲ್ಲಿರುವ ಅನೇಕರನ್ನು ಸದ್ದಿಲ್ಲದೆ ಸ್ಪರ್ಶಿಸಲು ಸಾಧ್ಯವಾಗಿರುವುದು ನನಗೆ ಸಂತಸ ತಂದಿದೆ. ■

## ಲೈಟ್ ಚಾನಲಿಂಗ್ ಕೇಂದ್ರಗಳು

### ಮೈಸೂರು

ಬುಧವಾರ (ಸಂಜೆ 6)
ಇನ್ಫೋಸಿಸ್ ಲಿ, ಹೆಬ್ಬಾಳ್ ಎಲೆಕ್ಟ್ರಾನಿಕ್ಸ್ ಸಿಟಿ, ಹೂಟಗಲ್ಲಿ, ಮೈಸೂರು-570018
☎ 9980837179, ಶ್ರೀ ಆನಂದ್ ನಿರಂಜನ್
☎ 8095026224, ಶ್ರೀ ಆಕಾಶ್ ಮಲ್ಲಿಕ್

### ಸೋಲಾಪೂರ್

ಪ್ರತಿದಿನ (ಸಂಜೆ 7:00 - 7:30)
ಬಾಲಗಣೇಶ್ ಮಂದಿರ, ಬುಶರ್ ಪೇಠ್, ಮೊಹೋಲ್
☎ 09860967066 ಶ್ರೀ ವಿವೇಕಾನಂದ ಸ್ವಾಮಿ
☎ 09970800279 ಶ್ರೀಮತಿ ಸ್ವರೂಪ ಸ್ವಾಮಿ

### ಚೆನ್ನೈ

ಭಾನುವಾರ (ಬೆಳಿಗ್ಗೆ 10:00 -10:30) ನಂ. 481, ಸಾಯಿಪ್ರೇಮ್, 19 ನೇ ರಸ್ತೆ, 4ನೇ ಸೆಕ್ಟರ್, ಕೆ. ಕೆ. ನಗರ
☎ 9444880409 ಶ್ರೀಮತಿ ರಾಜಲಕ್ಷ್ಮಿ ಆರ್.

### ತಿರುನಲ್ವೇಲಿ

ಪ್ರತಿ ದಿನ (ಸಂಜೆ 7:00 - 7:30)
ವಡಕ್ಕು ತೆರು, ಚೆಲ್ಲಾ ಪಿಳ್ಳೈಯಾರ್ ಕುಲಮ್
ಎ.ಪಿ. ನಾದನೂರ್ ಪೋಸ್ಟ್
ಆಲಂಗುಲಮ್ ತಾಲ್ಲೂಕು - 627423
☎ 9444458747 ಶ್ರೀ ಮಾರಿಯಪ್ಪನ್ ಎನ್.

### ಪುಣೆ

ಶನಿವಾರ (ಸಂಜೆ 6.30 - 7.00)
3 B, ಕಪಿಲ ಹೌಸಿಂಗ್ ಸೊಸೈಟಿ,
ಗೋಖಲೆನಗರ, ಪುಣೆ - 411016
☎ 9011038169 ಶ್ರೀ ಆಶುತೋಶ್ ನವನ್‌ಗುಲ್


ಗುರುವಾರ (ಮಧ್ಯಾಹ್ನ 2:30 - 3:00)
ಸಿಂಧಿ ಮಂದಿರ, ಸತ್ನಮ್ ಟೆಕ್ಸ್‌ಟೈಲ್ ಪಕ್ಕ, ಶಿವಸೇನ ಕಛೇರಿಯ ಸಮೀಪ, ಉರುಲಿ ಕಾಂಚನ್, ಹವೇಲಿ ಜಿಲ್ಲೆ, ಪುಣೆ - 412202
☎ 9822973632, ಶ್ರೀ ಗೋರಕ್ಷ್ ಮಹಾದಿಕ್

### ವಿಶಾಖಪಟ್ಟಣ

ಶನಿವಾರ (ಸಂಜೆ 7:00 - 7:30)
ಮನೆ ನಂ. 14-339/19, ಫ್ಲಾಟ್ ನಂ. 207, ಶ್ರೀ ಮಿತ್ರ ಹೈಟ್ಸ್, ಬಾಲಾಜಿ ಗಾರ್ಡನ್, ಗೋಪಾಲಪಟ್ನಂ, APRTC ಬಸ್ ಡಿಪೋ ಎದುರು
☎ 9848628324, ಶ್ರೀ ವಿ. ಹರಿಕೃಷ್ಣನ್

### ಮೀರಜ್

ಗುರುವಾರ (ಸಂಜೆ 7:45)
ಶ್ರೀ ಶಿವರುದ್ರ ಬಿ. ಬೆಲಗನ್ವಿ
C/o. ಶ್ರೀ ಸ್ವಾಮಿ ಸಮರ್ಥ ಸೇವಾ ಕೇಂದ್ರ
A-gat Plot No-135, ಸುಭಾಷ್ ನಗರ ಪೋಸ್ಟ್
☎ 9822421463 ಶ್ರೀ ಮಹಾಜನ್



## ಅನುಭವಗಳು

**ಸಂ: ವೈಶಾಲಿ ಜೋಶಿ; ಅನು: ಪಾಂಡುರಂಗ**

ಬೆಳಕಿನ ಅನೇಕ ಒಳ್ಳೆಯ ಗುಣಗಳಾದ ಶಾಂತಿ, ಸಮಾಧಾನ, ಪರಿಶುದ್ಧತೆ ಮತ್ತು ಸತ್ಯವನ್ನು ಅನುಭವಿಸಲು ನನಗೆ ಸಾಧ್ಯವಾಗಿದೆ. ಲೈಟ್ ಚಾನಲಿಂಗ್ ಮಾಡುವಾಗ ನನಗೆ ಸಂತೋಷವಾಯಿತು.

– ಜೆನಿಫರ್, 7ನೇ ತರಗತಿ,
ಸೇಂಟ್ ಅಂತೋಣಿ ಹಿರಿಯ ಪ್ರಾಥಮಿಕ ಶಾಲೆ,
ಬೆಂಗಳೂರು.

ನನಗೆ ಶಾಂತಿ ಮತ್ತು ಸಮಾಧಾನದ ಅನುಭವವಾಯಿತು ಹಾಗೂ ಬೆಳಕು ಇಡೀ ಪ್ರಪಂಚಕ್ಕೆ ಹರಡುತ್ತಿರುವಂತೆ ಭಾಸವಾಯಿತು.

– ತೇಜಸ್ವಿನಿ, 7ನೇ ತರಗತಿ,
ಶ್ರೀ ಸರಸ್ವತಿ ವಿದ್ಯಾ ಮಂದಿರ, ಬೆಂಗಳೂರು.

ನಾವು ಲೈಟ್ ಚಾನಲಿಂಗ್ ಅಭ್ಯಾಸವನ್ನು ತಪ್ಪದೆ ಮಾಡುತ್ತೇವೆ. ಕೆಲವು ತರಗತಿಗಳಲ್ಲಿ ಮಕ್ಕಳು ದಿನದಲ್ಲಿ 3 ಅಥವ 4 ಸಲ ಲೈಟ್ ಚಾನಲಿಂಗ್ ಮಾಡುತ್ತಾರೆ. ಮೊದಲಿಗೆ ಹೋಲಿಸಿದರೆ ನಾವು ಶಿಕ್ಷಕರು, ಮಕ್ಕಳಲ್ಲಿ ಬಹಳಷ್ಟು ಬದಲಾವಣೆಗಳನ್ನು ಕಂಡಿದ್ದೇವೆ. ಅವರೀಗ ತುಂಬಾ ಶಾಂತವಾಗಿರುತ್ತಾರೆ. ನಾನು ಒತ್ತಡಕ್ಕೆ ಸಿಲುಕಿದಾಗಲೆಲ್ಲಾ ಲೈಟ್ ಚಾನಲ್ ಮಾಡುತ್ತೇನೆ ಹಾಗೂ ಯಾವಾಗಲೂ ಸಮಾಧಾನವನ್ನು ಪಡೆದಿದ್ದೇನೆ.

– ಸರಸ್ವತಿ, ಮುಖ್ಯೋಪಾಧ್ಯಾಯಿನಿ,
ಶ್ರೀ ಸರಸ್ವತಿ ವಿದ್ಯಾ ಮಂದಿರ, ಬೆಂಗಳೂರು.

ವಿಶ್ವ ಸಂಚಲನ ದಿನವು ಒಂದು ಅದ್ಭುತವಾದ ಅನುಭವ. ಗುರೂಜಿ, ಋಷಿಗಳ, ಮತ್ತು ಆಸ್ಟ್ರಲ್ ಮಾಷ್ಟರುಗಳ ಮಾರ್ಗದರ್ಶಿಸುವ ಕೈಗಳಲ್ಲಿ ನಾನು ಇರಬೇಕೆಂದು ನಿಶ್ಚಯಿಸಿದೆ. ಭಯಗಳಿಂದ ಮತ್ತು ಮಾನಸಿಕ ಪ್ರತಿಬಂಧಗಳಿಂದ ಹೊರಗೆ ಬರುವ ಪ್ರಯತ್ನಕ್ಕೆ ಇದೊಂದು ಅವಕಾಶವೂ ಆಗಿತ್ತು. ನೆಮ್ಮದಿಯ ನೆಲೆ ಒಂದು ಸುಂದರ ತಾಣವಾದರೂ ಅಲ್ಲಿ ಯಾವುದೇ ರೀತಿಯ ಪ್ರಗತಿ ಸಾಧ್ಯವಿಲ್ಲ ಎನ್ನುವುದನ್ನು ಮನಗಂಡೆ. ವಂದನೆಗಳು.

– ಕವಿತ ಮಂಜುನಾಥ್, ಕಾರ್ಯಕರ್ತೆ

ವಿಶ್ವ ಸಂಚಲನ ದಿನಕ್ಕೆ ಒಂದು ವಾರದ ಮುಂಚೆ ನನ್ನ ಆರೋಗ್ಯ ಸರಿ ಇರಲಿಲ್ಲ. ಇದರಿಂದಾಗಿ ಲೈಟ್ ಚಾನಲಿಂಗ್ ಸೆಷನ್‌ಗಳಲ್ಲಿ ನನಗೆ ಭಾಗವಹಿಸುವುದಕ್ಕೆ ಸಾಧ್ಯವಾಗುವುದೋ ಇಲ್ಲವೊ ಎನ್ನುವ ಅತಿಯಾದ ಅನುಮಾನ ಮತ್ತು ಆತಂಕವಿತ್ತು. ಇನ್ನೇನು 2 ದಿನಗಳು ಇದೆ ಎನ್ನುವಾಗ ನನ್ನಲ್ಲಿ ಶಕ್ತಿ ವೃದ್ಧಿಸಿ, ಆತ್ಮವಿಶ್ವಾಸ ಮೂಡಿತು ಹಾಗೂ ನನ್ನ ಆರೋಗ್ಯ ನಿಧಾನವಾಗಿ ಸುಧಾರಿಸಿತು. ಗುರೂಜಿ, ಋಷಿಗಳು ಮತ್ತು ಮಾಷ್ಟರ್ ವಿ (ವಿಶ್ವಾಮಿತ್ರ ಮಹರ್ಷಿ) ಇರುವಾಗ ನಾನೇಕೆ ಭಯಪಡಬೇಕು ಎಂಬ ವಿಚಾರವನ್ನು ದಿನವೆಲ್ಲ ನನ್ನ ಮನಸ್ಸಿನಲ್ಲಿ ತುಂಬಿಕೊಂಡು ಸಂತೋಷವಾಗಿರಬೇಕೆಂದು ನಿರ್ಧರಿಸಿದೆ. 'ನನ್ನ ಪ್ರತಿಯೊಬ್ಬ ವಿದ್ಯಾರ್ಥಿಗೆ ವೈಯಕ್ತಿಕವಾಗಿ ಸಹಾಯ ಮತ್ತು ಮಾರ್ಗದರ್ಶನ ಮಾಡುತ್ತೇನೆ' ಎಂದು ಹೇಳಿದ ಗುರೂಜಿಯವರ ಮಾತುಗಳನ್ನು ನೆನಪಿಸಿಕೊಳ್ಳುತ್ತಾ ಶರಣಾದೆ ಹಾಗೂ ಅವರಲ್ಲಿ ಪ್ರಾರ್ಥನೆ ಮಾಡಿದೆ.

ವಿಶ್ವ ಸಂಚಲನ ದಿನ ಸಂತೋಷ, ಸಂಭ್ರಮದೊಂದಿಗೆ ಪ್ರಾರಂಭವಾಯಿತು. ಯಥೇಚ್ಛವಾದ ಚೈತನ್ಯ ಮತ್ತು ಸಂತೋಷದಿಂದ ಕೂಡಿದ ಸೆಷನ್ಸ್‌ಗಳು ಅದ್ಭುತವೆನಿಸಿದವು. ಶಾಲೆಯ ಆಡಳಿತ ವರ್ಗದವರು ತುಂಬಾ ಸಹಕಾರ ನೀಡಿದರು. ಒಂದು ಶಾಲೆಯಲ್ಲಿ ಸೆಷನ್ ನಡೆಯುತ್ತಿರುವಾಗ ವಿದ್ಯಾರ್ಥಿಗಳು, ಉಪಾಧ್ಯಾಯರು ಮತ್ತು ನಾನು, ಪ್ರೀತಿ ಮತ್ತು ಶಾಂತಿಯಿಂದ ಕೂಡಿದ ಒಂದು ಸುಂದರವಾದ ಜಗತ್ತಿನಲ್ಲಿ ಕಳೆದುಹೋಗಿದ್ದೆವು. ನಂತರ, ಹರುಷ, ಶಾಂತಿ, ಸಂತೋಷವನ್ನು ಸದಾಕಾಲ ಹೊತ್ತಿರುವ ಹಸನ್ಮುಖಿಗಳಾದ ಲೈಟ್ ಚಾನಲಿಂಗ್ ಕಾರ್ಯಕರ್ತರನ್ನು ಭೇಟಿ ಮಾಡಲು ತಮಗೆ ತುಂಬಾ ಸಂತೋಷವಾಗುತ್ತದೆ ಎಂದು ಹೇಳುತ್ತಾ ಮುಖ್ಯೋಪಾಧ್ಯಾಯರು ಮಾನಸ ಫೌಂಡೇಶನ್‌ನನ್ನು ವಂದಿಸಿದರು. ಕಾರ್ಯಕ್ರಮದ ಕೊನೆಯಲ್ಲಿ ನಾನು ತುಂಬಾ ಸಂತೋಷದಿಂದ ಇದ್ದೆ. ಜೀವನದ ಸೌಂದರ್ಯವನ್ನು ಅನುಭವಿಸಲು ಅವಕಾಶಗಳನ್ನು ನೀಡಿದ ಮಾನಸ ಬಳಗಕ್ಕೆ ನನ್ನ ಹೃದಯಾಂತರಾಳದಿಂದ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

– ಅನಿತ ಕೆ.ಎ., ಕಾರ್ಯಕರ್ತೆ

ನನ್ನ ಸುತ್ತಮುತ್ತ ಇರುವ ಜನರಿಂದ ಹರಿದುಬರುತ್ತಿರುವ ನಕಾರಾತ್ಮಕ ಚೈತನ್ಯಗಳ ದಾಳಿಯ ಬಿರುಸನ್ನು ನಾನು ಸಾಮಾನ್ಯವಾಗಿ ಎದುರಿಸುತ್ತಿರುತ್ತೇನೆ ಎನ್ನುವುದನ್ನು ಗಮನಿಸಿದ್ದೇನೆ. ಸತತ ಪ್ರಯತ್ನಗಳನ್ನು ಮಾಡುತ್ತಿದ್ದರೂ ಕೂಡ ನಕಾರಾತ್ಮಕ ಯೋಚನೆಗಳಿಂದಾಗಿ ನಾನು ಗೊಂದಲಕ್ಕೆ ಒಳಗಾಗುತ್ತಿದ್ದೆ. ಎರಡು ವಾರಗಳ ಲೈಟ್ ಚಾನಲಿಂಗ್ ಅಭ್ಯಾಸದ ನಂತರ ಈ ನಕಾರಾತ್ಮಕ ಚೈತನ್ಯಗಳು ನನ್ನ ಮೇಲೆ ಅಷ್ಟೊಂದು ಪ್ರಭಾವ ಬೀರದೇ ಇರುವುದನ್ನು ಗಮನಿಸಿದ್ದೇನೆ. ಲೈಟ್ ಚಾನಲಿಂಗ್ ಚೈತನ್ಯಗಳು ಬಹಳ ಶಕ್ತಿಯುತವಾಗಿವೆ!

– ಶ್ರೀಧರ್, ಲೈಟ್ ಚಾನಲಿಂಗ್ ಸೆಂಟರ್,
ಮಂಚ್‌ಕಿನ್ಸ್, ಬೆಂಗಳೂರು.

ಬೆಳಕಿನ ಸಂಚಲನ ಕನ್ನಡ ಮಾಸಪತ್ರಿಕೆ, ಖಾಸಗಿ ಪ್ರಸಾರಕ್ಕಾಗಿ ಮಾತ್ರ ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು: ಶ್ರೀದೇವಿ (ಮಾನಸ ಫೌಂಡೇಶನ್ (ರಿ) ಪರವಾಗಿ)
ಪ್ರಕಾಶನ ಸ್ಥಳ: ಮಾನಸ ಫೌಂಡೇಶನ್ (ರಿ), ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರಸ್ತೆ) ಬೆಂಗಳೂರು– 560077
ಮುದ್ರಣ ಸ್ಥಳ : ಗುಡ್ ಪ್ರಿಂಟ್ಸ್, ವೀಣ ಕಾಂಪ್ಲೆಕ್ಸ್, ಹಳೇ ಮದ್ರಾಸ್ ರಸ್ತೆ, ದೂರವಾಣಿನಗರ, ಬೆಂಗಳೂರು – 560 016
ಮಾಲೀಕರು ; ಮಾನಸ ಫೌಂಡೇಶನ್ (ರಿ), ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರಸ್ತೆ) ಬೆಂಗಳೂರು – 560077 ಸಂಪಾದಕರು: ಶ್ರೀದೇವಿ